| | | |
|---|---|---|
| OS | 96/2017 | ಡಿ.ಡಬ್ಲ್ಯೂ: 1 |

ಇಂದು ದಿ: 09.04.2026. ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಪ್ರತಿವಾದಿ ಪರ ವಕೀಲರಿಂದ:

ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣಪತ್ರ ಸಲ್ಲಿಸಿದ್ದು ಅದರಲ್ಲಿ ಹೇಳಿರುವ ವಿಚಾರಗಳು ಸತ್ಯವಾಗಿದ್ದು, ನಾನೇ ಹೇಳಿ ಬರೆಸಿರುತ್ತೇನೆ. ನಾನು ನನ್ನ ಪ್ರಕರಣದ ಸಮರ್ಥನೆಗಾಗಿ ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡಿದ್ದು, ಅವುಗಳನ್ನು ಈ ಕೆಳಗಿನಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| ನಿ ಡಿ 10 | ಒ ಎಸ್ 70/2025ರ ತೀರ್ಪು ಮತ್ತು ಡಿಕ್ರಿಯ ಧೃಡೀಕೃತ ನಕಲು |
| ನಿ ಡಿ 11 | ಒ ಎಸ್ 15/2019ರ ವಾದ ಪತ್ರ, ಪ್ರತಿವಾದ ಪತ್ರ, ಆದೇಶದ ಹಾಳೆಗಳ ಧೃಡೀಕೃತ ನಕಲುಗಳನ್ನು ಒಟ್ಟಾಗಿ |

ಪಾಟೀ ಸವಾಲು: ವಾದಿ ಪರ ವಕೀಲರಿಂದ:

ಸಿದ್ದರಾಜುರವರು ನನ್ನ ಮತ್ತು ನನ್ನ ಹೆಂಡತಿ ವಿರುದ್ದ ಸಲ್ಲಿಸಿದ್ದ ದಾವೆಯ ಬಗ್ಗೆ ನನ್ನ ವಕೀಲರು ಹೇಳಿದ ನಂತರ ತಿಳಿಯಿತು. ನಿ ಡಿ 10 ರ ದಾವೆಯ ಬಗ್ಗೆ ಈಗ್ಗೆ ಒಂದು ವಾರದ ಹಿಂದೆ ನನ್ನ ವಕೀಲರು ತಿಳಿಸಿದ ನಂತರ ತಿಳಿಯಿತು. ಸಿದ್ದರಾಜು ನನಗೆ ಗೊತ್ತು. ಸಿದ್ದರಾಜುಗೆ ನಾನು ರೂ 16 ಲಕ್ಷ ಹಣ ಕೊಡಬೇಕು. ಸಿದ್ದರಾಜುರವರಿಂದ ನಾನು 2016ರಲ್ಲಿ ಸಾಲ ಪಡೆದುಕೊಂಡಿರುತ್ತೇನೆ, ಅಂದರೆ ಈ ದಾವೆ ದಾಖಲಾಗುವ ಪೂರ್ವದಲ್ಲಿ ಸಾಲ ಪಡೆದುಕೊಂಡಿರುತ್ತೇನೆ. ಸಿದ್ದರಾಜುರವರಿಗೆ ನಾನು ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿದ್ದೇನೆ. ಈ ಹಿಂದೆ ನಾನು ಸಾಕ್ಷ್ಯ ನುಡಿಯುತ್ತಾ ಆಧಾರ ಪತ್ರ ಬರೆದುಕೊಟ್ಟಿದ್ದೇನೆ ಎಂದು ಹೇಳಿದ್ದೇನೆ ಆದರೆ ಆ ಸಾಕ್ಷ್ಯವು ಸುಳ್ಳು. ಕ್ರಯದ ಕರಾರು ಪತ್ರವನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಒ ಎಸ್ 70/2025 ರ ದಾವೆಯಲ್ಲಿ ನನಗೆ ಸಮನ್ಸ್ ಜಾರಿಯಾಗಿದೆ ಆದರೆ ನಾನು ಸುಮ್ಮನಿದ್ದು ನ್ಯಾಯಾಲಯಕ್ಕೆ ಹಾಜರಾಗಿಲ್ಲ.

ಚಂದ್ರಶೇಖರ ಬಿನ್ ಮಲ್ಲೇಗೌಡ, ತಗಡೂರು ಅಂದರೆ ನಾನೇ. ಸಾಕ್ಷಿಗೆ ಒ ಎಸ್ 70/2025ರಲ್ಲಿ ಬಂದ 2 ಸಮನ್ಸ್ ಗಳ ಧೃಡೀಕೃತ ನಕಲುಗಳನ್ನು ತೋರಿಸಿದ್ದು ಸಾಕ್ಷಿಯು ಅವುಗಳನ್ನು ಗುರುತಿಸಿದ್ದು ನಿಪಿ 10 ಮತ್ತು 11 ಎಂದು ಗುರುತಿಸಲಾಯಿತು. ನಿಪಿ 10 ಮತ್ತು 11 ರಲ್ಲಿ ನಾನಾಗಲೀ ಅಥವಾ ವಕೀಲರ ಮೂಲಕವಾಗಲೀ ದಿನಾಂಕ 03.06.2025 ರಂದು ಬೆಳಗ್ಗೆ 11.00ಗಂಟೆಗೆ ಹಾಜರಾಗಬೇಕೆಂದು ಬರೆದಿದೆ ಎಂದರೆ ನನಗೆ ಗೊತ್ತಿಲ್ಲ. ಆ ಸಮನ್ಸ್ ಗಳನ್ನು ನನ್ನ ವಕೀಲರಿಗೆ ಕೊಟ್ಟಿಲ್ಲ. ಆ ಸಮನ್ಸ್ ಗಳು ನ್ಯಾಯಾಲಯದಿಂದ ಬಂದ ಸಮನ್ಸ್ ಗಳು ಎಂದು ಗೊತ್ತಿತ್ತು, ಆದರೆ ಅದರಲ್ಲಿ ಏನು ಇರುವುದಿಲ್ಲ ಎಂದು ನಾನು ನನ್ನ ವಕೀಲರಿಗೆ ಕೊಟ್ಟಿರುವುದಿಲ್ಲ. ನಿ ಡಿ 10 ಮತ್ತು 11 ರ ಪ್ರತಿಗಳನ್ನುಪಡೆದುಕೊಂಡ ನಂತರವೂ ಸಹ ಒ ಎಸ್ 70/2025ರ ಬಗ್ಗೆ ನಾನು ಕ್ರಮ ಕೈಗೊಂಡಿಲ್ಲ. ನಿಡಿ 10 ರ ಆದೇಶ ಏನು ಎಂದು ತಿಳಿದುಕೊಂಡಿಲ್ಲ. ಕಕ್ಕರಹಟ್ಟಿ ಗ್ರಾಮದ ಸರ್ವೆ ನಂ. 8 ರಲ್ಲಿ 7 ಎಕರೆ 37 ಗುಂಟೆ ಆಸ್ತಿಗೆ ದಾವೆ ನಡೆದಿತ್ತು ಎಂದು ತಿಳಿದುಕೊಂಡಿದ್ದೇನೆ. ಈ ದಾವೆಯನ್ನು ವಾದಿಗಳು ದಾವಾ ಆಸ್ತಿಯ ಸ್ವಾಧೀನ ಬಿಟ್ಟುಕೊಡಬೇಕು

ಎಂದು ಹಾಕಿದ ದಾವೆ ಎಂದರೆ 2 ದಾವೆಗಳ ಸ್ವತ್ತುಗಳೂ ಸಹ ಒಂದೇ ಸ್ವತ್ತು. ಆ ದಾವೆಯಲ್ಲಿ ಹಾಜರಾಗಿ ಪ್ರಸ್ತುತ ದಾವೆಯು ಒಂದೇ ಸರ್ವೆ ನಂಬರ್ ಗೆ ಸಂಬಂಧಿಸಿದ್ದು ಎಂದು ನ್ಯಾಯಾಲಯಕ್ಕೆ ಹೇಳಲು ತೊಂದರೆ ಇತ್ತೇ ಎಂದರೆ ಸಾಕ್ಷಿ ಬೇಕು ಎಂದು ಕೇಳಿದ ಕಾರಣ ತೊಂದರೆ ಇತ್ತು. ಸಮನ್ಸ್ ಜೊತೆ ಸಿದ್ದರಾಜು ಸಲ್ಲಿಸಿದ ದಾವೆಯ ಪ್ರತಿಯೂ ಸಹ ಜಾರಿಯಾಗಿದೆ ಎಂದರೆ ಸರಿ. ಒ ಎಸ್ 70/2025ರ ವಾದ ಪತ್ರದ ಧೃಡೀಕೃತ ನಕಲನ್ನು ಸಾಕ್ಷಿಯು ಒಪ್ಪಿಕೊಂಡಿದ್ದು ಅದನ್ನು ನಿ ಪಿ 12 ಎಂದು ಗುರುತಿಸಲಾಯಿತು. 2016 ಮತ್ತು 2019ರಲ್ಲಿ ಸಿದ್ದರಾಜುರವರಿಗೆ 2 ಕರಾರು ಪತ್ರಗಳನ್ನು ಮಾಡಿಕೊಟ್ಟಿದ್ದೇನೆ. 2019 ಮತ್ತು 2019ರ ಕರಾರುಗಳನ್ನು ನಾನು ನ್ಯಾಯಾಲಯದ ಗಮನಕ್ಕೆ ತಂದಿಲ್ಲ. ಸಿದ್ದರಾಜು ದಾವೆ ಸಲ್ಲಿಸುವ ಪೂರ್ವದಲ್ಲಿ ವಕೀಲರ ಮೂಲಕ ನನಗೆ ನೊಟೀಸ್ ಜಾರಿ ಮಾಡಿಲ್ಲ.

ದಿನಾಂಕ 16.05.2016ರಂದು ನಾನು ಮತ್ತು ನನ್ನ ಹೆಂಡತಿ ಸೇರಿ ಸಿದ್ದರಾಜುರವರಿಗೆ ಒಂದು ಕರಾರು ಮಾಡಿರುತ್ತೇವೆ ಎಂದು ಸಾಕ್ಷಿಯು ನೋಡಿ ಒಪ್ಪಿರುತ್ತಾರೆ. ಸದರಿ ಕರಾರು ಪತ್ರದ ಧೃಡೀಕೃತ ನಕಲನ್ನು ನಿಪಿ 13 ಎಂದು ಗುರುತಿಸಲಾಯಿತು. 4ನೇ ಪ್ರತಿವಾದಿ ಸಿದ್ದರಾಜುರವರು ಈ ಕರಾರಿನ ಬಗ್ಗೆ ನ್ಯಾಯಾಲಯಕ್ಕೆ ಹೇಳಿಲ್ಲ ಎಂದರೆ ಸರಿಯಲ್ಲ. 2016ರ ಕರಾರು ಆದ ನಂತರ ಸಿದ್ದರಾಜುರವರಿಂದ ಹಣ ಪಡೆದುಕೊಂಡಿಲ್ಲ. ದಿನಾಂಕ 13.02.2019 ರಂದು ನಾನು ಮತ್ತು ನನ್ನ ಹೆಂಡತಿ ಸೇರಿ  ವಾಯಿದೆ ಮುಂದೂಡಿಕೆ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತೇವೆ. ಎಂದು ಸಾಕ್ಷಿಯು ನೋಡಿ ಒಪ್ಪಿರುತ್ತಾರೆ. ಸದರಿ ವಾಯಿದೆ ಮುಂದೂಡಿಕೆ ಕರಾರು ಪತ್ರದ ಧೃಡೀಕೃತ ನಕಲನ್ನು ನಿಪಿ 14 ಎಂದು ಗುರುತಿಸಲಾಯಿತು. ನಿ ಪಿ 14ರ ಕರಾರಿನಲ್ಲಿ ನಾನು ಹೆಚ್ಚುವರಿ ಹಣ ಪಡೆದುಕೊಂಡಿಲ್ಲ. 2 ಕರಾರಿನಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ 3ನೇ ಪ್ರತಿವಾದಿ ಬ್ಯಾಂಕ್ ನಿಂದ 3 ಲಕ್ಷ ಸಾಲವನ್ನು 2009ರಲ್ಲಿ ಪಡೆದುಕೊಂಡಿದ್ದೇನೆ. ಇದೇ ಆಸ್ತಿ ಮೇಲೆ ಬ್ಯಾಂಕ್ ಗೂ ಸಹ ಕರಾರು ಪತ್ರ ಬರೆದುಕೊಟ್ಟಿದ್ದೇನೆ. 16ಲಕ್ಷ ರೂಗಳನ್ನು ಸಿದ್ದರಾಜುರವರಿಂದ ನಗದಾಗಿ ಪಡೆದುಕೊಂಡಿದ್ದೇನೆ. ಆ ಹಣವನ್ನು ನಾನು ವ್ಯವಸಾಯಕ್ಕೆ ಉಪಯೋಗಿಸಿರುತ್ತೇನೆ. ಸಿದ್ದರಾಜು ನನಗೆ ರೂ 16 ಲಕ್ಷ ಕೊಟ್ಟಿಲ್ಲ, ನಾನು ಮತ್ತು ನನ್ನ ಮನೆಯವರು ಈ ದಾವೆಯ ವಾದಿಗೆ ಮೋಸ ಮಾಡಲು ಸುಳ್ಳು ಕರಾರು ಬರೆದಿದ್ದೇವೆ ಎಂದರೆ ಸರಿಯಲ್ಲ.

ಈ 2 ಕರಾರುಗಳನ್ನು ಹೊರತುಪಡಿಸಿ ನೊಂದಾವಣಿ ಆಗದ ಬೇರೆ ಕರಾರನ್ನು ಬರೆದುಕೊಟ್ಟಿಲ್ಲ. ದಿನಾಂಕ  25.10.2022 ರಂದು ನಾನು ಮತ್ತು ನನ್ನ ಹೆಂಡತಿ ಸೇರಿ ಕ್ರಯದ ಮುಂದೂಡಿಕೆ ಕರಾರು ಪತ್ರವನ್ನು ಸಿದ್ದರಾಜುರವರಿಗೆ ಬರೆದುಕೊಟ್ಟಿದ್ದೇವೆ. ಸಾಕ್ಷಿಯು ಸದರಿ ಕ್ರಯದ ಮುಂದೂಡಿಕೆ ಕರಾರು ಪತ್ರದ ಧೃಡೀಕೃತ ನಕಲನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 15 ಎಂದು ಗುರುತಿಸಲಾಯಿತು. ನಾನು ಮತ್ತು ನನ್ನ ಹೆಂಡತಿ ಸಹಿ ಮಾಡಿ ವಕೀಲರ ನೊಟೀಸ್ ಪಡೆದುಕೊಂಡಿದ್ದೇವೆ ಎಂದರೆ ಸರಿ. ವಕೀಲರ ನೊಟೀಸ್ ಕಛೇರಿ ಪ್ರತಿ ಮತ್ತು ಅಂಚೆ ಸ್ವೀಕೃತಿಗಳ ಧೃಡೀಕೃತ ನಕಲನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 16 ಮತ್ತು 17 ಎಂದು ಗುರುತಿಸಲಾಯಿತು. ಆ ದಾವೆಯಲ್ಲಿ ಸರ್ವೆ ನಂ. 8 ಕ್ಕೆ ಸಂಬಂಧಿಸಿದಂತೆ ಸಿದ್ದರಾಜು ಆರ್ ಟಿ ಸಿ ಹಾಜರುಪಡಿಸಿದ್ದಾರೆ ಎಂದರೆ ಸರಿ. ಸಾಕ್ಷಿಯು ಆರ್ ಟಿ ಸಿಯ ಧೃಡೀಕೃತ ನಕಲನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 18 ಎಂದು ಗುರುತಿಸಲಾಯಿತು. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಬ್ಯಾಂಕ್ ನಿಂದ ನಾನು 3 ಲಕ್ಷ ಸಾಲ ಪಡೆದುಕೊಂಡ ಬಗ್ಗೆ ನಿಪಿ 18ರ ಆರ್ ಟಿ ಸಿ ಯಲ್ಲಿ ನಮೂದು ಇರುತ್ತದೆ. ಸಿದ್ದರಾಜು ಆ ದಾವೆಯಲ್ಲಿ ದಾಖಲೆ ಹಾಜರುಪಡಿಸಿ ಸಾಕ್ಷ್ಯ ನುಡಿದಿದ್ದಾರೆ ಎಂದರೆ ಸರಿ. ಸದರಿ ದಾಖಲೆ ಧೃಡೀಕೃತ ನಕಲನ್ನು

ನಿಪಿ 19 ಎಂದು ಗುರುತಿಸಲಾಯಿತು. ಆ ದಾವೆಯಲ್ಲಿ ನಾನು ಉದ್ದೇಶಪೂರ್ವಕವಾಗಿ ಹಾಜರಾಗದೇ ಏಕಪಕ್ಷೀಯವಾಗುವಂತೆ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಸಿದ್ದರಾಜು ಸೇರಿಕೊಂಡು ನ್ಯಾಯಾಲಯಕ್ಕೆಮಾಹಿತಿ ಕೊಡದೇ ವಾದಿಗೆ ವಂಚನೆ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ಸಿದ್ದರಾಜುರವರು ಈ ನ್ಯಾಯಾಲಯದಲ್ಲಿ ಆ ದಾವೆಯ ತೀರ್ಪಿನಂತೆ ಜಾರಿ ಅರ್ಜಿ ಹಾಕಿರುವ ವಿಚಾರ ನನಗೆ ಗೊತ್ತು ಮತ್ತು ನನಗೆ ನ್ಯಾಯಾಲಯದಿಂದ ನನಗೆ ನೊಟೀಸ್ ಬಂದಿರುತ್ತದೆ. ಕಳೆದ ದಿನಾಂಕ 04.04.2026ರಂದು ನ್ಯಾಯಾಲಯದಲ್ಲಿ ಪ್ರಕರಣ ಇದ್ದು, ನಾನು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ ಎಂದರೆ ಸರಿ. ಸರ್ವೆ ನಂ. 8 ರ ಆಸ್ತಿಯನ್ನು ಕರಾರು ಪತ್ರ ಸಾಕ್ಷಿಯು ಸದರಿ ಆದೇಶದ ಧೃಡೀಕೃತ ನಕಲು ಮತ್ತು ಜಾರಿ ಅರ್ಜಿಯ ಧೃಡೀಕೃತ ನಕಲನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 20 ಎಂದು ಗುರುತಿಸಲಾಯಿತು. ನಿ ಡಿ 10 ರ ಆದೇಶ ರದ್ದು ಮಾಡಿ ಎಂದು ನಾನು ಈವರೆಗೆ ಅರ್ಜಿ ಕೊಟ್ಟಿಲ್ಲ.

ನಿ ಡಿ 11ರ ದಾವೆಯು ದಿನಾಂಕ 19.11.2024ರಂದು ವಜಾ ಆಗಿದೆ ಎಂದರೆ ಪ್ರಕರಣ ನಡೆಯುತ್ತಿದೆ ಎನ್ನುತ್ತಾರೆ. ಸರೋಜಮ್ಮ ಮತ್ತು ಸಾವಿತ್ರಮ್ಮ ನನ್ನ ಸ್ವಂತ ಸಹೋದರಿಯರು. ಈ ದಾವೆಯು ಯಾವೆಲ್ಲಾ ಸ್ವತ್ತುಗಳಿಗೆ ಸಂಬಂಧಿಸಿದೆ ಎಂದು ನನಗೆ ಗೊತ್ತು. ವಜಾವಾದ ಪ್ರಕರಣದಲ್ಲಿ ನಾನು ವಕಿಲರನ್ನು ನೇಮಕ ವಾಡಿಕೊಂಡು ಪ್ರತಿವಾದ ಪತ್ರ ಸಲ್ಲಿಸಿಲ್ಲ. ಒ ಎಸ್ 15/2019 ಅನ್ನು ದಾಖಲಿಸಲು ನನ್ನ ಸಹೋದರಿಯರಿಗೆ ಇಚ್ಛೆ ಇರಲ್ಲಿಲ್ಲ ಆದರೆ ನನ್ನ ಚಿತಾವಣೆ ಮೇರೆಗೆ ಸಲ್ಲಿಸಲಾಗಿತ್ತು ಎಂದರೆ ಸರಿಯಲ್ಲ. ವಾದಿಗಳಿಗೆ ಆಸ್ತಿ ದಕ್ಕ ಬಾರದು ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ., ನಂಜನಗೂಡು.